**ಚೀಮನಹಳ್ಳಿ ರಮೇಶಬಾಬು**

'ಲೇ ಮುಂಡೆ ಮಗ್ನೆ ನಿಂಕೇನೊ ಬಂದಿರೋದ್ರೋಗ... ನಿನ್ ಜನ್ಮ ನಾಶಿನಾಗ, ನಿನ್ ಸಂಸಾರ ಎಕ್ಕುಟ್ಹೋಗ. ಅಲ್ಲ ಕನ್ಲ ನಾ ಆವಾಕ್ಣಿಂಚಿ ಬಾಯಿ ಹರ್ಕೊಂಡು ಮಾತಾಡ್ತಿದೀನಿ ಸುಮ್ಕೆ ಕುಂತೀಯಲ್ಲ... ನಿನ್ ನಾಲುಗೇಲಿ ಹುಳ ಬೀಳ. ನೀನು ನಿನ್ ಸಂಸಾರ ಸುಕ್ವಾಗಿ ಉಣ್ಕಂಡು ಕುಂತಿದ್ರೆ ಇಲ್ಲಿ ನನ್ ಕಸ್ಟ ಕೇಳೋನ್ಯಾರೊ... ನಿಂಕೆ ಗರ ಬಡಿಯ... ಬರ್ಬಾರ್ದರ್ ರೋಗ ಬರ... ಲೇ ಏನೊ ಅಂಕ್ನೋಡ್ತಿ ಕಣ್ಗುಡ್ಡೆ ಇಸ್ಕಾಕ್ಬಿಡ್ತೀನಿ. ದುರ್ಗುಟ್ ನೋಡ್ತೀಯ ಬಡ್ಡಿ ಮಗ್ನೆ. ಇರು ನಿಂಕೆ... ಇಲ್ಲೇನು ಸಿಕ್ತಿಲ್ಲ ಲೇದಂಟೆ ಚಮ್ಡ ಸುಲ್ದಾಕ್ಬಿಡ್ತಿದ್ದೆ. ಯೇಮಿ ತೆಲುಸ್ಕೋಂಡಾವ್ರ ಬಡ್ಡಿಕೊಡಕ. ನನ್ನೂರ್ನಾಕೆ ನಂಕೆ ಅವುಮಾನ ಮಾಡ್ತೀಯ. ನಿನ್ ತಲೆ ಕಡ್ದು ನಾಯೀಗಾಕ್ಬಿಡ್ತೀನಿ ಉಶಾರ್. ಜಮ್ಮಂತ ಬದ್ಕಿದ್ ವಂಶ ಕನ್ಲ ನಂದು... ಈವಾಕ ನಡುನೀರಾಕ ತಂದು ಕಣ್ಮುಚ್ಕೊಂಡ್ ಕುಂತೀಯ... ಹೆಣ್ಮುಂಡೆ ಇವಳ್ ಕೈನಾಕ ಏನಾಗ್ತೈತಿ ಅಂತ ಅನ್ಕೋಬೇಡ. ಮೊದ್ಲೆ ಗಯ್ಯಾಳಿ ನಾನು, ಊರ್ಕೆ ದಿಗ್ಲು ನನ್ಕಂಡ್ರೆ. ಇನ್ನು ನೀನ್ಯಾವ ಲೆಕ್ಕ, ಹರ್ಕೊಂಡು ಮುಕ್ಬಿಡ್ತೀನಿ ಹಲ್ಕಟ್ ಮಗ್ನೆ. ಇನ್ನೊಂದ್ಕಿತ ನನ್ ಸಾವಾಸಕ್ಕೆ ಬಂದ್ರೆ ಜುಟ್ಟು ಯಿಡ್ದು ಊರ ಬೀದಿಗಳ್ಲಾಕ ಮಾನ ಮೂರ್ಕಾಸ್ಗೆ ಅರಾಜಾಕ್ತೀನಿ... ಬಡ್ಡಿಕೊಡಕ ನೇನೆ ಕಾವಾಲ್ನೇಮ್ರ ನೀಕು...' ಹೀಗೆ ಸೂರ್ಯ ಹುಟ್ಟುತ್ತಿದ್ದಂತೆಯೆ ನಂಜಮ್ಮನ ಬಯ್ಗುಳ ಇಡೀ ಊರಿಗೆ ಕೇಳಿಸತೊಡಗಿತು. ತನ್ನ ಮನೆಯ ಮುಂದೆ ಕುಳಿತು ಆಕಾಶದ ಕಡೆ ಕೈತೋರಿಸುತ್ತಾ ಹೀಗೆ ಬಯ್ಗುಳದ ಮಳೆ ಸುರಿಸುವ ಪರಿ ಊರಿಗೆ ಹೊಸದೇನು ಅಲ್ಲ. ಅವಳಿರುವುದೆ ಹಾಗೆ. ದಿನಕ್ಕೆ ಒಮ್ಮೆಯಾದರು ಹೀಗೆ ಬಯ್ಯಲಿಲ್ಲವೆಂದರೆ ಅವಳಿಗೆ ತಿಂದದ್ದು ಅರಗುವುದೆ ಇಲ್ಲವೆಂದು ಎದುರು ಮನೆಯ ಮಂಜೇಗೌಡನ ಸಮೇತ ಊರವರಿಗೆಲ್ಲ ಗೊತ್ತು. ಅವಳು ಬಯ್ಗುಳ ಶುರು ಮಾಡುತ್ತಿದ್ದಂತೆ ಹೊರಗೆ ಬಂದ ಮಂಜೇಗೌಡ, 'ಏನ್ ನಂಜಕ್ಕ ಇವತ್ತು ಮುಂಜಾನೇಕೆ ಶುರು ಮಾಡ್ಬಿಟ್ಟೆ... ಎದಿ ಹಗೂರಾಗೊ ತನ್ಕ ಬಿಡ್ಬೇಡ. ನೀನ್ತಾನೆ ಏನ್ಮಾಡ್ತಿ, ಅವುನ್ಕಲ್ದೆ ಇನ್ನಾರ್ಕೆ ಅನ್ಬೇಕು ನೀನು' ಎನ್ನುತ್ತಾ ತನ್ನ ಪಾಡಿಗೆ ತಾನು ಡಾಬಾದ ಕಡೆಗೆ ಹೊರಟುಬಿಟ್ಟಿದ್ದ.

ಕಳೆದ ರಾತ್ರಿ ನಂಜಮ್ಮ ಇನ್ನೇನು ಮಲಗಲೆಂದು ಅಣಿಯಾಗುತ್ತಿದ್ದಂತೆ ಮಳೆ ಶುರುವಿಟ್ಟುಕೊಂಡಿತ್ತು. ಬಹಳ ದಿನಗಳ ನಂತರ ಅಪರೂಪಕ್ಕೆ ಬಂದ ಮಳೆ ಸರಿಯಾಗಿ ಜಡಿದಿತ್ತು. ಮುಂಗಾರು ಶುರುವಾಗುವ ಮೊದಲೆ ಮನೆಯ ಮೇಲೆ ಮಣ್ಣು ಹೊಡೆಸಬೇಕು ಅಂದುಕೊಂಡಿದ್ದಳು. ಅಚಾನಕ್ಕಾಗಿ ಬಂದ ಮಳೆ ಮೂರು ತಾಸಿಗೂ ಹೆಚ್ಚು ಬಿಡದೆ ಹೊಡೆಯಿತು. ಮಳೆಯ ರಭಸಕ್ಕೆ ಮನೆಯ ಮೇಲಿದ್ದ ಒಂದಷ್ಟು ಮಣ್ಣು ಕೊಚ್ಚಿಕೊಂಡು ಹೋಗಿದ್ದರಿಂದ ತಾರಸಿ ಸೋರಲು ಶುರುವಿಟ್ಟುಕೊಂಡಿತ್ತು. ಆ ಸಮಯದಲ್ಲಿ ನಂಜಮ್ಮನಿಗೆ ದಿಕ್ಕು ತೋಚಿರಲಿಲ್ಲ. ಸೋರಿದ ಕಡೆಯೆಲ್ಲ ಪಾತ್ರೆ, ಚಂಬು, ಗ್ಲಾಸು, ಬಿಂದಿಗೆ, ತಪಲೆ, ತಟ್ಟೆ ಹೀಗೆ ಕೈಗೆ ಸಿಕ್ಕಿದ್ದೆಲ್ಲವನ್ನು ಇಟ್ಟಿದ್ದಳು. 'ಅಯ್ಯೋ ನನ್ ಬುದ್ಧೀಕೆ ಮಣ್ ಬಡಿಯ... ಕೂನಿಕೆ ನೀರೋಗ್ದಂಗೆ ಅಡ್ಲಾಗಿ ಏನಾರ ನಿಂತಿರ್ಬೇಕು. ಅದ್ಕೆ ಈ ಪಾಟಿ ಸೋರ್ತಿದೆ. ವೋಗಿ ತೆಗೆದಿದ್ರೆ ಸರೋಗಿರೋದು' ಎಂದುಕೊಳ್ಳುತ್ತ ಹೊಸ್ತಿಲ ಬಳಿ ಬಂದಿದ್ದಳು. ಜೋರು ಮಳೆ ಜೊತೆಗೆ ಕತ್ತಲು. ಮತ್ತೆ ಒಳ ಹೋದ ಅವಳು ಒಂದು ಕೈಯಲ್ಲಿ ಟಾರ್ಚ್ ಹಿಡಿದು ಮತ್ತೊಂದು ಕೈಯಲ್ಲಿ ತನ್ನ ಮದುವೆಯ ಹೊಸದರಲ್ಲಿ ತಂದೆ ಕೊಡಿಸಿದ್ದ ಹಳೇ ಕಪ್ಪು ಛತ್ರಿಯನ್ನು ಹಿಡಿದು ಆಚೆ ಬಂದಿದ್ದಳು. ಇದನ್ನು ಗಮನಿಸಿದ್ದ ಮಂಜೇಗೌಡ 'ನಂಜಕ್ಕೊ ಮಳೆ ಜೋರೈತಿ ಮನಿ ವ್ಯಾಕೆ